
## ಸಹವಾಸ ದೋಷ



**ಬ**ಹಳ ಹಿಂದೆ ಸತ್ಯನಿಷ್ಠನೂ ಪರಿಶುದ್ಧನೂ ಆಗಿದ್ದ ತಪಸ್ವಿಯೊಬ್ಬನು ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದನು. ಆ ಅರಣ್ಯವು ಸಂತುಷ್ಟವಾದ ಮೃಗ-ಪಕ್ಷಿಗಳಿಂದ ತುಂಬಿದ್ದಿತು. ಘೋರವಾದ ತಪಸ್ಸು ಮಾಡುತ್ತಿದ್ದ ಆ ತಪಸ್ವಿಯ ತಪಸ್ಸಿಗೆ ವಿಘ್ನವನ್ನುಂಟು ಮಾಡಲು ಇಂದ್ರನು ಸೈನಿಕನೊಬ್ಬನ ವೇಷವನ್ನು ಧರಿಸಿ ಖಡ್ಗಪಾಣಿಯಾಗಿ ಆಶ್ರಮದಲ್ಲಿದ್ದ ಆ ತಪಸ್ವಿಯ ಬಳಿಗೆ ಬಂದನು. ತನ್ನ ಖಡ್ಗವನ್ನು ಯಾರಾದರೂ ತೆಗೆದುಕೊಂಡು ಹೋಗಿಬಿಡಬಹುದು, ಆದ್ದರಿಂದ ಇದನ್ನು ರಕ್ಷಿಸಿ ಇಡಬೇಕೆಂದೂ ಸ್ವಲ್ಪ ಕಾಲದ ನಂತರ ಬಂದು ತೆಗೆದುಕೊಂಡು ಹೋಗುವುದಾಗಿಯೂ ಅವನು ಕೇಳಿಕೊಂಡನು.

ಆ ತಪಸ್ವಿಯು ಸೈನಿಕನು ತನ್ನಲ್ಲಿಟ್ಟಿದ್ದ ನಂಬಿಕೆಯಿಂದಾಗಿ ಆ ಕತ್ತಿಯ ರಕ್ಷಣೆಯಲ್ಲಿಯೇ ಜಾಗರೂಕನಾಗತೊಡಗಿದನು. ಧ್ಯಾನ ಮಾಡುವಾಗ ಯಾರಾದರೂ ಕತ್ತಿಯನ್ನು ಅಪಹರಿಸಿಬಿಡುತ್ತಾರೆಂದು ಭಾವಿಸಿ ಧ್ಯಾನವನ್ನೂ ಬಿಟ್ಟನು. ಕತ್ತಿ ಹಿಡಿದುಕೊಂಡೇ ಅರಣ್ಯದಲ್ಲಿ ಸಂಚರಿಸತೊಡಗಿದನು. ಕಂದಮೂಲಗಳನ್ನು ತರಲು ಹೋಗುವಾಗಲೂ ಅದನ್ನು ಹಿಡಿದುಕೊಂಡೇ ಹೋಗುತ್ತಿದ್ದನು. ಕತ್ತಿಯಿಲ್ಲದೆ ಎಲ್ಲಿಗೂ ಹೋಗುತ್ತಿರಲಿಲ್ಲ. ಕ್ರಮೇಣ ಅವನಿಗೆ ತಪಸ್ಸು ಮಾಡಬೇಕೆಂಬ ಬುದ್ಧಿಯೇ ಹೊರಟುಹೋಯಿತು. ಅದುವರೆಗೂ ಸಾತ್ವಿಕವಾಗಿದ್ದ ಅವನ ಬುದ್ಧಿಯು ತಾಮಸವಾಗತೊಡಗಿತು. ಕತ್ತಿಯ ಸಹವಾಸದಿಂದಾಗಿ ಅವನ ಮನಸ್ಸಿನಲ್ಲಿ ಕ್ರೌರ್ಯದ ಭಾವನೆಯುಂಟಾಯಿತು. ಆ ಖಡ್ಗದ ಸಹವಾಸದಿಂದಾಗಿ ಅವನಿಗೆ ಮರ-ಗಿಡಗಳನ್ನೂ ಪ್ರಾಣಿಗಳನ್ನೂ ಕೊಚ್ಚಿ ಹಾಕಬೇಕೆನಿಸಿತು. ಕ್ರಮೇಣ ನಿಷ್ಠಾವಂತ ತಪಸ್ವಿಯಾಗಿದ್ದ ಅವನು ಕಟುಕನಾಗಿ ಪರಿವರ್ತಿತನಾಗಿದ್ದ.

ಇದಕ್ಕೇ ಸಹವಾಸದೋಷ ಎನ್ನುತ್ತಾರೆ. ಪ್ರಾಣಿಗಳಿಗೆ ಯಾವ ವಿಧವಾದ ಹಿಂಸೆಯನ್ನೂ ಕೊಡಕೂಡದೆಂದುಕೊಂಡಿದ್ದ ತಪಸ್ವಿಯ ಬುದ್ಧಿಯು ಕತ್ತಿಯ ಸಂಗದಿಂದಾಗಿ ಹೊಡಿ-ಬಡಿ-ಕಡಿ ಎಂದು ಪ್ರೇರೇಪಿಸತೊಡಗಿತು. ಎಷ್ಟೇ ಜಿತೇಂದ್ರಿಯನಾಗಿದ್ದರೂ ದುರ್ಜನರ ಸಹವಾಸ ಮಾಡಿದರೆ ಅವನ ದೌರ್ಜನ್ಯವು ಇವನಿಗೂ ಸ್ವಲ್ಪ ಅಂಟದೇ ಇರುವುದಿಲ್ಲ. ಇದಕ್ಕೆ ಈ ಋಷಿಯ ಚರಿತ್ರೆಯೇ ನಿದರ್ಶನ.

**(ಆಧಾರ : ಶ್ರೀಮದ್ವಾಲ್ಮೀಕಿ ರಾಮಾಯಣ, ಅರಣ್ಯಕಾಂಡ, ಸರ್ಗ-೯)**